ಪ್ರಾರಂಭವಾಗಬೇಕಾಗಿದೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ಶಂಕರನಾಯಕ್ :— ಮಾನ್ಯ ಅಧ್ಯಕ್ಷರೇ, ನಿರ್ದಿಷ್ಟವಾಗಿ ಯಾವ ಆಸ್ಪತ್ರೆ ಎಂದು ಕೇಳಿದರೆ ನಾವು ಯಾವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ ಎನ್ನುವುದನ್ನು ಹೇಳಬಹುದು. ಈಗ ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದ್ದಾರೆ ಆ ಬಗ್ಗೆ ಮಾಹಿತಿ ಇಲ್ಲ. ಬೇರೆ ನೋಟೀಸ್ ಕೊಟ್ಟರೆ ತರಿಸಿ ಕೊಡುತ್ತೇನೆ.

<u>ಹೊನ್ನಾವರ ತಾಲ್ಲೂಕಿನ ಕೆಳಗಿನೂರು ನೆಲವಂಕಿಯಲ್ಲಿ ಕಿರಿಯ ಪ್ರಾಥಮಿಕ ಶಾಲೆಗೆ ಕಟ್ಟಡ ಮಂಜೂರು.</u>

24(127) ಶ್ರೀ ಶಿವಾನಂದ ನಾಯಕ್ (ಭಟ್ಕಳ) :— ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾವರ ತಾಲ್ಲೂಕಿನ ಕೆಳಗಿನೂರು ನೆಲವಂಕಿಯಲ್ಲಿ ಕಿರಿಯ ಪ್ರಾಥಮಿಕ ಶಾಲೆಗೆ ಕಟ್ಟಡ ಮಂಜೂರು ಮಾಡಲಾಗಿದೆಯೇ?

ಆ) ನೆಲವಂಕಿ ಕಿರಿಯ ಪ್ರಾಥಮಿಕ ಶಾಲೆ ಬೇರೆ ಕಡೆಗೆ ಸ್ಥಳಾಂತರಿಸಲಾಗಿದೆಯೇ

ಇ) ಹಾಗಿದ್ದಲ್ಲಿ ಸ್ಥಳಾಂತರಿಸಲು ಕಾರಣಗಳೇನು?

ಈ) ಅದನ್ನು ನೆಲವಂಕಿಯಲ್ಲಿಯೇ ಮುಂದುವರೆಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :—

ಅ) ಹೌದು. ಇದಕ್ಕಾಗಿ 98-99ನೇ ಸಾಲಿನಲ್ಲಿ ಕಟ್ಟಡ ನಿರ್ಮಿಸಲು 60,000-00 ಗಳನ್ನು ಮಂಜೂರು ಮಾಡಲಾಗಿದೆ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಈ) ನೆಲವಂಕಿಯ ಕಿರಿಯ ಪ್ರಾಥಮಿಕ ಶಾಲೆಯ ಕೊಠಡಿಯನ್ನು ನೆಲವಂಕಿಯಲ್ಲಿಯೇ ಕಟ್ಟಲು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹೊನ್ನಾವರ ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ್ ಇವರಿಗೆ ದಿನಾಂಕ 16-2-1999 ರಂದು ಇಲಾಖಾ ಮಟ್ಟದಲ್ಲಿ ಪತ್ರ ಬರೆಯಲಾಗಿದೆ.

ಶ್ರೀ ಶಿವಾನಂದ ನಾಯಕ್ :— ಮಾನ್ಯ ಅಧ್ಯಕ್ಷರೇ ಹಿರಿಯ ಸಚಿವರಾಗಿರತಕ್ಕಂಥ ಮಾನ್ಯ ಗೋವಿಂದೇಗೌಡರ ಬಗ್ಗೆ ನಮಗೆ ತುಂಬಾ ಅಭಿಮಾನ ಮತ್ತು ಗೌರವ ಸಹ ಇತ್ತು. ಅವರು ಕೊಟ್ಟಿರತಕ್ಕಂಥ ಉತ್ತರದಲ್ಲಿ ಎರಡು ರೀತಿಯಾದ ಉತ್ತರವನ್ನು ಕೊಟ್ಟಿದ್ದಾರೆ. ಜಿಲ್ಲಾ ಅಧಿಕಾರಿಗಳಿಗೆ ಬೇರೆ ರೀತಿಯಾದ ಒಂದು ಆದೇಶವನ್ನು ಹೊರಡಿಸಿದ್ದಾರೆ. ನೆಲವಂಕಿಯಲ್ಲಿ ಮಕ್ಕಳ ಸಂಖ್ಯೆ ಕಡಿಮೆ ಇದ್ದುದ್ದರಿಂದ ಇದನ್ನು ವಹಾರದಲ್ಲಿಯೇ ಮುಂದುವರಿಸಬೇಕೆನ್ನುವ ಒಂದು ಉತ್ತರವನ್ನು ಕೊಟ್ಟಿದ್ದಾರೆ. ಆ ರೀತಿಯಾಗಿ ಅವರು ಲಿಖಿತವಾಗಿ ಒಂದು ಆದೇಶವನ್ನು ಹೊರಡಿಸಿದ್ದಾರೆ. ಇದರಿಂದ ನಮಗೆ ಅರ್ಥವಾಗುತ್ತದೆ ಮಾನ್ಯ ಗೋವಿಂದೇಗೌಡರು ಜನಪ್ರತಿನಿಧಿಗಳಿಗಿಂತ ತಮ್ಮ ಪಾರ್ಟಿ ಪ್ರಮುಖರು ಹೇಳುವಂತೆ ಕೇಳುತ್ತಾರೆಂದು, ಕಾನೂನು ಬದ್ಧವಾಗಿ ನಡೆದುಕೊಳ್ಳದೇ ಅವರು ಅವರ ಪಕ್ಷದ ಹಿತದೃಷ್ಟಿಯನ್ನು ಇಟ್ಟುಕೊಂಡು ಅವರು ಈ ರೀತಿಯ ಒಂದು ಆದೇಶವನ್ನು ಕೊಟ್ಟಿದ್ದಾರೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಅಲ್ಲಿ ಮಕ್ಕಳ ಸಂಖ್ಯೆ ಕಡಿಮೆ ನನ್ನ ಇದೆ ಎನ್ನುವಂತಹ ಒಂದು ಉತ್ತರವನ್ನು ಕೊಟ್ಟಿದ್ದಾರೆ. ಮಕ್ಕಳ ಸಂಖ್ಯೆ ಪೂರ್ಣ ಯಾದಿ ನನ್ನ ಹತ್ತಿರ ಇದೆ. ನೆಲವಂಕಿ ಎನ್ನುವಂತಹ ಊರು ಸುಮಾರು 4 ಕಿಲೋಮೀಟರ್ ಸುತ್ತಮುತ್ತ ಯಾವುದೇ ಸಂಪರ್ಕ ಇಲ್ಲದೇ ಇರುವಂತಹ ಊರು. ಅದು ಗುಡ್ಡದ ಮೇಲೆ ಇರತಕ್ಕಂಥಾ ಊರು. ಸಾಮಾನ್ಯವಾಗಿ 16 ಜನ ಮಕ್ಕಳು ಈಗಾಗಲೇ ಶಾಲೆಗೆ ಹೋಗುತ್ತಿದ್ದಾರೆ. ಬೇರೆ 12 ಜನ ಮಕ್ಕಳು ತಮ್ಮ ಸಂಬಂಧಿಗಳು ಇರತಕ್ಕಂಥಾ ಊರಿನಲ್ಲಿ ಶಾಲೆಗೆ ಹೋಗುತ್ತಿದ್ದಾರೆ.

ಅಧ್ಯಕ್ಷರು :— ಮಾನ್ಯ ಶಿವಾನಂದ ನಾಯಕ್ ಅವರೇ ತಮ್ಮ ಪ್ರಶ್ನೆಯಲ್ಲಿ ಆ ಊರಿನಲ್ಲಿ ಶಾಲಾ ಕಟ್ಟಡ ಕಟ್ಟಿದೆಯೇ ಎಂದು ಕೇಳಿದ್ದಕ್ಕೆ 'ಹೌದು' ಎಂದು ಹೇಳಿದ್ದಾರೆ. ಬದಲಾವಣೆ ಮಾಡಲಾಗುತ್ತದೆಯೇ ಎಂದು ಕೇಳಿದ್ದಕ್ಕೆ 'ಇಲ್ಲ' ಎಂದು ಉತ್ತರ ಹೇಳಿದ್ದಾರೆ. ನೀವೇನೂ ಬದಲಾವಣೆ ಮಾಡಿದ್ದಾರೆಂದು ಹೇಳುವುದಾ?

ಶ್ರೀ ಶಿವಾನಂದ ನಾಯಕ್ :— ಮಾನ್ಯ ಅಧ್ಯಕ್ಷರೇ ಇಲ್ಲಿ ಉತ್ತರದಲ್ಲಿ ಬದಲಾವಣೆ ಮಾಡುವುದಿಲ್ಲ ಅದೇ ಕಟ್ಟಡದಲ್ಲಿ ಮುಂದುವರಿಸುತ್ತೇವೆಂದು ಹೇಳಿದ್ದಾರೆ. ಸರ್ಕಾರಿ ಅಧಿಕಾರಿಗಳ ಆದೇಶದ ಮೇರೆಗೆ ಕಟ್ಟಡವನ್ನು ಮಾಡಿದ್ದಾರೆ. ಆದರೆ ಶಾಲೆ ಅಲ್ಲಿ ನಡೆಯುತ್ತಿಲ್ಲ ವಹಾರದಲ್ಲಿ ನಡೆಯುತ್ತಿದೆ. ಮತ್ತೆ ಅದೇ ವಹಾರದಲ್ಲಿ ನಡೆಯಬೇಕೆಂದು ಮಾನ್ಯ ಸಚಿವರೇ ಒಂದು ಆದೇಶವನ್ನು ಹೊರಡಿಸಿದ್ದಾರೆ. ಇಲ್ಲಿ ಮಾನ್ಯ ಮಂತ್ರಿಗಳು ಕೊಟ್ಟಿರುವಂತಹ ಉತ್ತರ ಬೇರೆ ಇದೆ. ಅಲ್ಲಿ ಸರ್ಕಾರಿ ಅಧಿಕಾರಿಗಳಿಗೆ ಕೊಟ್ಟಿರುವಂತಹ ಆದೇಶ ಬೇರೆ ಇದೆ.

ಅಧ್ಯಕ್ಷರು :— ಇಲ್ಲಿ ಇರುವಂಥಾದ್ದನ್ನು ಸ್ಥಳಾಂತರಿಸಿ ಎಂದು ಆದೇಶ ಮಾಡಿದ್ದಾರೆಯೇ? ಆದೇಶ ತಮ್ಮ ಹತ್ತಿರ ಇದ್ದರೆ ಕಳುಹಿಸಿ ಕೊಡಿ.

(ಮಾನ್ಯ ಸದಸ್ಯರು ಆದೇಶದ ಪ್ರತಿಯನ್ನು ಮಾನ್ಯ ಅಧ್ಯಕ್ಷರಿಗೆ ಕಳುಹಿಸಿಕೊಟ್ಟರು)

ಶ್ರೀ ಎಚ್.ಜಿ. ಗೋವಿಂದೇಗೌಡ :— ಮಾನ್ಯ ಅಧ್ಯಕ್ಷರೇ, ನೆಲವಂಕಿಯಲ್ಲಿ ಏನು ಶಾಲೆ ನಡೆಯುತ್ತಿದೆ ಅದರ ಬಗ್ಗೆ ಪರಿಶೀಲನೆ ಮಾಡಿ ಅದು ಯಾವುದೇ ಕಾರಣಕ್ಕೂ ಬದಲಾವಣೆ ಆಗಬಾರದು ಎನ್ನುವ ಆದೇಶವನ್ನು ಕಳುಹಿಸಿಕೊಟ್ಟಿದ್ದೇನೆ. ಆಮೇಲೆ 60 ಸಾವಿರ ರೂಪಾಯಿಗಳ ಹಣವನ್ನು ಕೊಟ್ಟು ನಾವು ಅಲ್ಲಿ ಕಟ್ಟಡವನ್ನು ಕಟ್ಟಿಸಲು ಆದೇಶವನ್ನು ಕೊಟ್ಟಿದ್ದೇನೆ.

ಡಾ. ಎಂ.ಪಿ. ಕರ್ಕಿ :— ಮಾನ್ಯ ಅಧ್ಯಕ್ಷರೇ, ಮಂತ್ರಿಗಳು ಆದೇಶ ಕೊಟ್ಟಿದ್ದಾರೆಂದು ಅಲ್ಲಿನ ಉಪ ನಿರ್ದೇಶಕರು ಅಲ್ಲಿನ ಬಿ.ಇ.ಓ.ಗೆ ಹೇಳಿದ್ದಾರೆ, ನೆಲವಂಕಿ ಶಾಲೆಯನ್ನು ವಡ್ಡಾವರಕ್ಕೆ ಸ್ಥಳಾಂತರ ಮಾಡಬೇಕು ಎಂದು ಹೇಳಿ. ತಮ್ಮ ಟಿಪ್ಪಣಿ ಆಧಾರದ ಮೇಲೆ ಮಾಡಿದ್ದೇವೆಂದು ಹೇಳಿದ್ದಾರೆ. ತಾವು ಟಿಪ್ಪಣಿ ಕೊಡದೇ ಅವರು ಆ ಆದೇಶವನ್ನು ಹೊರಡಿಸಿದ್ದರೆ ಆ ಅಧಿಕಾರಿಗಳಿಗೆ ಏನು ಶಿಕ್ಷೆ ಕೊಡುತ್ತೀರಿ? ತಮ್ಮ ಉತ್ತರದಲ್ಲಿ ತಾವು ಬದಲಾವಣೆ ಮಾಡುವುದಿಲ್ಲವೆಂದು ಹೇಳಿದ್ದೀರಿ. ಅಲ್ಲಿನ ಉಪನಿರ್ದೇಶಕರು ಏನು ಶಿಕ್ಷೆ ಕೊಡುತ್ತೀರಿ? ತಮ್ಮ ಉತ್ತರದಲ್ಲಿ ತಾವು ಬದಲಾವಣೆ ಮಾಡುವುದಿಲ್ಲವೆಂದು ಹೇಳಿದ್ದೀರಿ. ಅಲ್ಲಿನ ಉಪ ನಿರ್ದೇಶಕರು ಏನು ಹೇಳಿದ್ದಾರೆ ಅಂದರೆ ತಮ್ಮ ಟಿಪ್ಪಣಿ ಮೇರೆಗೆ ನೆಲವಂಕಿಯಿಂದ ವಡ್ಡಾವರಕ್ಕೆ ವರ್ಗಾವಣೆ ಮಾಡಿದ್ದೇವೆಂದು ಹೇಳಿದ್ದಾರೆ.

ಶ್ರೀ ಎಚ್.ಜಿ. ಗೋವಿಂದೇಗೌಡ :— ಮಾನ್ಯ ಅಧ್ಯಕ್ಷರೇ, ನಾನು ಆ ಆರ್ಡರ್ಸ್ ನೋಡಿಲ್ಲ. ಅಧಿಕೃತವಾಗಿ ನೆಲವಂಕಿಯಿಂದ ಯಾವುದೇ ರೀತಿಯ ಸ್ಥಳ ಬದಲಾವಣೆ ಮಾಡುವುದಿಲ್ಲ. ನೆಲವಂಕಿಯಲ್ಲಿಯೇ ಅದು ನಡೆಯಬೇಕು. ಇಷ್ಟು ದಿವಸ ಶಾಲಾ ಕಟ್ಟಡ ಇಲ್ಲ ಎಂದು ಹೇಳಿ 60 ಸಾವಿರ ರೂಪಾಯಿಗಳನ್ನು ಒದಗಿಸಿದ್ದೇವೆ. ಶಾಲಾ ಕಟ್ಟಡಗಳನ್ನು ಆದಷ್ಟು ಬೇಗ ಕಟ್ಟಬೇಕೆಂದು ನಾನು ಜಿಲ್ಲಾ ಪಂಚಾಯತಿಯವರಿಗೆ ಆದೇಶ ಕೊಡುತ್ತೇನೆ.

ಅಧ್ಯಕ್ಷರು :— ನಾವು ಇದನ್ನು ಬೆಳೆಸಿಕೊಂಡು ಹೋಗುವುದು ಬೇಡ. ನಾವು ಇದಕ್ಕೆ ಒಂದು ಪರಿಹಾರ ಕಂಡುಹಿಡಿಯೋಣ. ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆ ಸರಿ ಇದೆ. ಉತ್ತರ ಏನು ಬಂದಿದೆ ಅದು ಸರಿ ಇಲ್ಲ. ಮಾನ್ಯ ಮಂತ್ರಿಗಳ ಆದೇಶ ಏನು ಇದೆ ಆದೇಶ ಬೇರೆ ಹೇಳುತ್ತದೆ, ಉತ್ತರ ಬೇರೆ ಹೇಳುತ್ತದೆ. ಈ ಆದೇಶ ಏನು ಇದೆ ಇದನ್ನು ರದ್ದುಪಡಿಸಿ ಅಲ್ಲಿ ವಡ್ಡಾರದಲ್ಲಿ ಇರತಕ್ಕಂಥಾದ್ದು ಅಲ್ಲಿಯೇ ನಡೆದುಕೊಳ್ಳಲಿ ನೆಲವಂಕಿಯಲ್ಲಿ ಇರುವುದು ನೆಲವಂಕಿಯಲ್ಲಿಯೇ ಮುಂದುವರಿಸಿಕೊಂಡು ಹೋಗಬೇಕೆಂದು ಮಾಡಿಸೋಣ.

ಡಾ: ಎಂ.ಪಿ. ಕರ್ಕಿ :— ಈಗ ಏನು ಮಾಡಿದ್ದಾರೆ ಅಂದರೆ ನೆಲವಂಕಿ ಶಾಲೆಯನ್ನು ಮುಂದಿನ ವರ್ಷ ಕೊಡುತ್ತೇವೆಂದು ಹೇಳಿದ್ದಾರೆ. ಎಲ್ಲಿ ಶಾಲೆಯ ಅಗತ್ಯ ಇದೆಯೋ ಅಲ್ಲಿ ಮುಂದಿನ ವರ್ಷ. ಎಲ್ಲಿ ಶಾಲೆ ಅಗತ್ಯ ಇಲ್ಲವೋ ಅಲ್ಲಿ ಈ ವರ್ಷ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು :— ಪ್ರಾಥಮಿಕ ಶಾಲೆ ಅಲ್ಲವೇ, ಈಗ ಏಪ್ರಿಲ್ 10ನೇ ತಾರೀಖಿಗೆ ಅವಧಿ ಮುಗಿಯುತ್ತದೆ. ಮತ್ತೆ ಮೇ 22ನೇ ತಾರೀಖಿಗೆ ಪುನಃ ಪ್ರಾರಂಭವಾಗುವುದು. ಬರುವ ಶೈಕ್ಷಣಿಕ ವರ್ಷದಿಂದ ಅಲ್ಲಿ ಪ್ರಾರಂಭ ಮಾಡಿ ಎಂದು ಹೇಳೋಣ. ಒಂದು ಆದೇಶ ನಿಮ್ಮಲ್ಲಿಂದ ಏನು ಹೋಗಿದೆ ಅದರಲ್ಲಿ ಇದಕ್ಕೆ ತದ್ವಿರುದ್ಧವಾದ ಅರ್ಥವನ್ನು ಕೊಡುತ್ತದೆ. ನಿಮ್ಮ ಕಛೇರಿಯಿಂದ ಹೋಗಿರುವ ಆದೇಶ ಏನು ಇದೆ ಅದನ್ನು ಹಿಂದಕ್ಕೆ ಪಡೆದುಕೊಳ್ಳಿ. ಉತ್ತರದಲ್ಲಿ ಏನು ಹೇಳಿದ್ದೀರಿ ಅದಕ್ಕೆ ತಾವು ಸ್ಥಿರವಾಗಿ ನಿಂತುಬಿಟ್ಟರೆ ಆಗ ಸರಿಹೋಗುತ್ತದೆ.

<u>ದಶಲಕ್ಷ ಬಾವಿ ಯೋಜನೆಯಡಿಯಲ್ಲಿ, ಒದಗಿಸಿದ ಹಣ, ಬಿಡುಗಡೆಯಾದ ಹಣ, ಹಾಗೂ ಖರ್ಚಾದ ಹಣ ಕುರಿತು.</u>

26(399) ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) :— ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. 1996-97 1997-98 ಹಾಗೂ 1998-99ನೇ ಸಾಲಿನಲ್ಲಿ ದಶಲಕ್ಷ ಬಾವಿ ಯೋಜನೆಯಡಿಯಲ್ಲಿ ಒದಗಿಸಿದ ಹಣವೆಷ್ಟು; ಬಿಡುಗಡೆ ಮಾಡಿದ ಹಣವೆಷ್ಟು ಹಾಗೂ ಖರ್ಚಾದ ಹಣವೆಷ್ಟು; ವರ್ಷವಾರು ವಿವರ ನೀಡುವುದು, 1998-99 ನೇ ಸಾಲಿಗೆ 31-11-1999ರವರೆಗೆ ವಿವರ ನೀಡುವುದು)

2. ಸದರಿ ಸಾಲಿನಲ್ಲಿ ಬಾವಿಗಳನ್ನು ನಿರ್ಮಿಸಲು ಹೊಂದಿದ್ದ ಗುರಿ ಎಷ್ಟು ಸಾಧಿಸಿದ ಪ್ರಗತಿ ಎಷ್ಟು (ಜಿಲ್ಲಾವಾರು ವಿವರಿಸುವುದು)?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :—

ಲಕ್ಷ ರೂ.ಗಳಲ್ಲಿ

ವರ್ಷ	ಒದಗಿಸಿದ ಅನುದಾನ	ಬಿಡುಗಡೆಯಾದ ಅನುದಾನ	ಖರ್ಚು ಮಾಡಿದ ಅನುದಾನ
1996-67	2915.52	2635.63	2750.86
1997-98	2900.47	2550.56	2799.96
1998-99	2390.40	1192.04	1336.44

2. ವಿವರಗಳನ್ನು ಅನುಬಂಧದಲ್ಲಿ ನಮೂದಿಸಲಾಗಿದೆ.

ಅನುಬಂಧ - ೧

ಕ್ರಮ ಸಂಖ್ಯೆ	ಜಿಲ್ಲೆ	1996-97		1997-98		1998-99 ಜನವರಿ ಅಂತ್ಯಕ್ಕೆ	
		ಗುರಿ	ಪ್ರಗತಿ	ಗುರಿ	ಪ್ರಗತಿ	ಗುರಿ	ಪ್ರಗತಿ
1	2	3	4	5	6	7	8
1.	ಬೆಂಗಳೂರು (ನಗರ)	—	—	—	—	—	—
2.	ಬೆಂಗಳೂರು (ಗ್ರಾ)	—	—	—	—	—	—
3.	ಕೋಲಾರ	35	3	—	—	—	—
4.	ತುಮಕೂರು	—	—	—	—	—	—
5.	ಚಿತ್ರದುರ್ಗ	—	—	—	—	—	—
6.	ದಾವಣಗೆರೆ	—	—	—	—	11	—
7.	ಶಿವಮೊಗ್ಗ	183	147	369	255	393	135
8.	ಮೈಸೂರು	979	842	1104	240	868	78
9.	ಚಾಮರಾಜನಗರ	—	—	—	—	102	31
10.	ಮಂಡ್ಯ	122	22	100	58	120	54
11.	ಹಾಸನ	57	57	137	57	137	31
12.	ಚಿಕ್ಕಮಗಳೂರು	197	15	126	35	134	18
13.	ಕೊಡಗು	—	—	—	—	—	—
14.	ದಕ್ಷಿಣ ಕನ್ನಡ	149	94	57	24	199	136
15.	ಬೆಂಗಳೂರು (ನಗರ)	110	83	142	112	96	—
16.	ಬೆಳಗಾಂ	670	301	504	197	433	114
17.	ಬಿಜಾಪುರ	550	300	621	366	212	58
18.	ಬಾಗಲಕೋಟೆ	—	—	—	—	79	11
19.	ಧಾರವಾಡ	—	—	—	—	—	—
20.	ಗದಗ್	—	—	—	—	—	—
21.	ಹಾವೇರಿ	—	—	—	—	—	—
22.	ಉತ್ತರ ಕನ್ನಡ	54	40	67	65	59	7
23.	ಗುಲ್ಬರ್ಗಾ	1403	144	1339	80	1259	—
24.	ರಾಯಚೂರು	2275	1113	1455	869	902	390
25.	ಕೊಪ್ಪಳ	—	—	—	—	377	225
26.	ಬಳ್ಳಾರಿ	15	15	10	7	17	2
27.	ಬೀದರ್	115	111	120	124	142	23

ಶ್ರೀ ಬಿ.ಎಸ್. ಯಡಿಯೂರಪ್ಪ :— ಮಾನ್ಯ ಅಧ್ಯಕ್ಷರೇ, ನಾನು ಬಹಳ ಪ್ರಮುಖವಾದ ಪ್ರಶ್ನೆಯನ್ನು ಕೇಳಿದ್ದೆ. ವಿಶೇಷವಾಗಿ ನೂರಕ್ಕೆ ತೊಂಬತ್ತು ಭಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಗಳಿಗೆ ಅನುಕೂಲವಾಗುವಂತಹ ದಶಲಕ್ಷ ಬಾವಿ ಯೋಜನೆ ಬಗ್ಗೆ ನಾನು ಕೇಳಿದ್ದೆ. ಮಾನ್ಯ ಅಧ್ಯಕ್ಷರೇ, ತಾವು ಅಂಕಿಅಂಶ ನೋಡಿ. 1996-97ನೇ ಸಾಲಿನಲ್ಲಿ ತಾವು 165 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಿಲ್ಲ. .1997-98ನೇ ಸಾಲಿನಲ್ಲಿ ಅವರೇ ಕೊಟ್ಟಿರತಕ್ಕಂಥ ಅಂಕಿಅಂಶಗಳನ್ನು ನೋಡಿದರೆ 101 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿಲ್ಲ. 199-99ನೇ ಸಾಲಿನಲ್ಲಿ ಅನುದಾನ 2,390 ಲಕ್ಷ ರೂಪಾಯಿಗಳು ಆದರೆ ಬಿಡುಗಡೆಯಾದ ಅನುದಾನ 1,192 ಲಕ್ಷ ರೂಪಾಯಿಗಳು ಮಾತ್ರ. ಅಂದರೆ 10 ಕೋಟಿ ರೂಪಾಯಿಗಳನ್ನು ತಾವು ಖರ್ಚು ಮಾಡಿಲ್ಲ. ಇದು ನೂರಕ್ಕೆ ತೊಂಭತ್ತು ಭಾಗದಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮಾಡಿರುವಂತಹ ಯೋಜನೆ. ನಾನು ಉದ್ದೇಶಪೂರ್ವಕವಾಗಿಯೇ 1996-97, 1997-98 ಮತ್ತು 1998-99ನೇ ಸಾಲಿನಲ್ಲಿ ದಶಲಕ್ಷ ಬಾವಿ ಯೋಜನೆಯಲ್ಲಿ ತಮ್ಮ ಪ್ರಗತಿ ಏನು ಎಂದು ಕೇಳಿದ್ದೇನೆ. ಶಿವಮೊಗ್ಗ ಜಿಲ್ಲೆಯಲ್ಲಿ ನೋಡಿ 1996-97ನೇ ಸಾಲಿನಲ್ಲಿ 183 ಗುರಿಗೆ 147 ಮಾತ್ರ ಪ್ರಗತಿ ಇದೆ. 1997-98ನೇ ಸಾಲಿನಲ್ಲಿ 369ಕ್ಕೆ 255 ಮಾತ್ರ ಪ್ರಗತಿ. 1998-99ನೇ ಸಾಲಿನಲ್ಲಿ 393 ಗುರಿಗೆ 195 ಮಾತ್ರ ಪ್ರಗತಿ. ಮೈಸೂರು ಜಿಲ್ಲೆಯಲ್ಲಿ 379 ಗುರಿಗೆ 872 ಪ್ರಗತಿ. 1997-98 ನೇ ಸಾಲಿನಲ್ಲಿ 1,004ರ ಗುರಿಗೆ ಪ್ರಗತಿ 248 ಮಾತ್ರ ಪ್ರಗತಿ 1998-99ನೇ ಸಾಲಿನಲ್ಲಿ 868 ಗುರಿಗೆ ಪ್ರಗತಿ 78 ಮಾತ್ರ. ಇಲ್ಲಿ ತಾವು ಗುಲ್ಬರ್ಗಕ್ಕೆ ಬಂದರೆ ಆಶ್ಚರ್ಯವಾಗುತ್ತದೆ. 1996-97ನೇ ಸಾಲಿನಲ್ಲಿ 1,483 ಗುರಿ ಇದ್ದರೆ ಕೇವಲ 144 ಮಾತ್ರ ಪ್ರಗತಿ. 1997-98ನೇ ಸಾಲಿನಲ್ಲಿ ಗುರಿ ಇದ್ದದ್ದು 1,399 ಆದರೆ ಪ್ರಗತಿ 80 ಮಾತ್ರ. 1998-99 ರಲ್ಲಿ 1,259ರ ಗುರಿಗೆ ಏನೂ ಪ್ರಗತಿ ಇಲ್ಲ. ಅದೇ ರೀತಿ ರಾಯಚೂರು ತೆಗೆದುಕೊಂಡರೆ ಅದು ಅದೇ ರೀತಿ. ನಾನು ಇಲ್ಲಿ ಏನನ್ನು ಕೇಳುವುದಕ್ಕೆ ಹೊರಟಿದ್ದೇನೆಂದರೆ ಇದು ನೂರಕ್ಕೆ ನೂರರಷ್ಟು ಕೇಂದ್ರ ಸರ್ಕಾರದ ಹಣ. ಈ ಹಣವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ಉಪಯೋಗ ಮಾಡಲು ನೋಡಿಕೊಳ್ಳುವುದರಲ್ಲಿ ತಾವು ಏಕೆ ವಿಫಲರಾಗಿದ್ದೀರಿ? ಫಲಾನುಭವಿಗಳನ್ನು ಗುರುತು ಮಾಡುವುದರಲ್ಲಿ ತಮಗೆ ಏನಾದರೂ ತೊಂದರೆ ಆಗಿದೆಯೇ? ಯಾವ ಅರ್ಹತೆ ಮೇಲೆ ತಾವು ಫಲಾನುಭವಿಗಳನ್ನು ಗುರುತಿಸುತ್ತಿದ್ದೀರಿ? ನನಗೆ ಗೊತ್ತಿರುವ ಮಾಹಿತಿಯ ಪ್ರಕಾರ ಕನಿಷ್ಟ ಆತ ಎರಡೂವರೆ ಎಕರೆ ಜಮೀನು ಹೊಂದಿರಬೇಕೆಂದು ಹೇಳುತ್ತೀರಾ. ಆ ರೀತಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನಾಂಗದಲ್ಲಿ ಸಿಗುವುದಿಲ್ಲ. ಕನಿಷ್ಟ ಒಂದು ಎಕರೆ ಅರ್ಧ ಎಕರೆ ಇದ್ದರೂ ಸಹ ನೀವು ಈ ಯೋಜನೆಯಲ್ಲಿ ಅವಕಾಶ ಮಾಡಿಕೊಟ್ಟರೆ ಅಲ್ಲಿ ಆತ ಒಂದು ಬಾವಿಯನ್ನು ತೆಗೆದು ಹಣ್ಣು ಹಂಪಲು ಬೆಳೆದು ಬದುಕುತ್ತಿದ್ದ. ಕೇಂದ್ರ ಸರ್ಕಾರದ

ಹಣವನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ಏನಾದರೂ ಒಂದು ಸ್ಪಡೀ ಮಾಡಬೇಕಲ್ಲ. ಇದಕ್ಕೆ ಇರುವ ಕೊರತೆ ಏನು ಎನ್ನುವ ಅಂಕಿಅಂಶಗಳನ್ನು ತಾವು ಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್:— ಮಾನ್ಯ ಅಧ್ಯಕ್ಷರೇ ಇದು ಸಂಪೂರ್ಣವಾಗಿ ಕೇಂದ್ರ ಸರ್ಕಾರ ಕೊಡುವ ಹಣ ಅಲ್ಲ. ಇದು 80 ಮತ್ತು 20ರ ಅನುಪಾತದಲ್ಲಿ ನಡೆಯುವ ಕಾರ್ಯಕ್ರಮ. ರಾಜ್ಯ ಸರ್ಕಾರ 20 ಭಾಗ ಕೊಡುತ್ತದೆ. ದಶ ಲಕ್ಷ ಬಾವಿ ಯೋಜನೆ ರೂಪಿಸುವಂತಹ ಸಂದರ್ಭದಲ್ಲಿ ಇದು ಒಂದು ಉಪ ಖಂಡ ವ್ಯಾಪ್ತಿಯನ್ನು ಪಡೆದಿರತಕ್ಕಂಥ ಭಾರತ ದೇಶದಲ್ಲಿ ಬೇರೆ ಬೇರೆ ರಾಜ್ಯಗಳ ವಿಶಿಷ್ಟ ವಿಚಾರಗಳನ್ನು ತೆಗೆದುಕೊಳ್ಳದೇ ಇರತಕ್ಕಂಥಾದ್ದು ಕೂಡ ತೊಂದರೆ ಆಗಿದೆ. ಅವರು ತೆರೆದ ಬಾವಿಗಳಿಗೆ ಅನುಕೂಲವನ್ನು ಮಾಡಿಕೊಡುತ್ತಾರೆ. ಆದರೆ ನಮ್ಮಲ್ಲಿ ತೆರೆದ ಬಾವಿಗಳನ್ನು ತೆರೆಯುವುದಕ್ಕೆ ಆಗುವುದಿಲ್ಲ. ತೆರೆದ ಬಾವಿಗಳನ್ನು ಎಲ್ಲಿ ಹೆಚ್ಚು ತೆಗೆಯುತ್ತಾರೋ ಅಲ್ಲಿ ಹೆಚ್ಚು ಹಣ ಉಪಯೋಗವಾಗಿದೆ. ಈಗಾಗಲೇ ನಮ್ಮಲ್ಲಿ ಮುನ್ನೂರು, ನಾಲ್ಕುನೂರು ಅಡಿ ಹೋಗತಕ್ಕಂಥ ಕೋಲಾರ ಜಿಲ್ಲೆಯಾಗಲಿ, ಬಳ್ಳಾರಿ ಜಿಲ್ಲೆಯಾಗಲಿ, ಬೇರೆ ಜಿಲ್ಲೆಗಳಲ್ಲಿ ಈ ತೆರೆದ ಬಾವಿಗಳನ್ನು ಯಾರೂ ತೆಗೆಸುವುದಿಲ್ಲ. ಈ ಕಾರಣಕ್ಕೆ ಶೇಕಡಾ 60 ನ್ನು ಖರ್ಚು ಮಾಡುತ್ತಾರೆ ಉಳಿದಿರತಕ್ಕಂಥ ಶೇಕಡಾ 40 ಭಾಗವನ್ನು ತೆರೆದ ಬಾವಿಗಳನ್ನು ತೆಗೆಯುವುದಕ್ಕೆ ಸಾಧ್ಯವಾಗದೇ ಇರತಕ್ಕಂಥ ಸಂದರ್ಭದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ವರ್ಗದವರು ಚೆಕ್ ಡ್ಯಾಮ್ ಮೊದಲಾದುದಕ್ಕೆ ಹಣವನ್ನು ಉಪಯೋಗಿಸಬೇಕು. ಎನ್ನತಕ್ಕದ್ದು ಇದೆ. ನಾವು ಈ ಭಾಗಗಳಲ್ಲಿ, ಇರತಕ್ಕಂಥ ಜಲಾನಯನ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿರತಕ್ಕಂಥ ಹಣವನ್ನು ಅಲ್ಲಿ ಖರ್ಚು ಮಾಡಿರುವುದರಿಂದ ಕೇವಲ ಎರಡು ಎಕರೆ, ಎರಡೂವರೆ ಎಕರೆ ಇರತಕ್ಕಂಥಾದ್ದರಲ್ಲಿ ಚೆಕ್ ಡ್ಯಾಮ್ ಮೊದಲಾಗಿರತಕ್ಕಂಥ ಬೇರೆಬೇರೆ ಬದುಗಳನ್ನು ನಿರ್ಮಾಣ ಮಾಡಿಕೊಡುವುದರಿಂದ ಅವರ ಭೂಮಿ ಕಡಿಮೆಯಾಗುತ್ತದೆ ಎಂದು ಹೇಳಿ ಫಲಾನುಭವಿಗಳು ಮುಂದೆ ಬರುತ್ತಿಲ್ಲ. ಈ ಕಾರಣದಿಂದ ಆಗಿದೆಯೇ ವಿನಹ ಅನುಷ್ಠಾನಗೊಳಿಸುವುದರಲ್ಲಿ ಯಾವುದೇ ವಿಧವಾದಂಥ ವಿಫಲತೆ ಅಥವಾ ಅಲಸ್ಯವಾಗಲೀ ಇಲ್ಲವೆಂದು ತಮ್ಮ ಮೂಲಕ ನಾನು ಅವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:— ನನಗೆ ಬಹಳ ಸ್ಪಷ್ಟವಾದ ಒಂದು ಸಂಗತಿಯನ್ನು ಹೇಳಬೇಕು. ನಾನು ಕೇಳುವಂಥಾದ್ದು ಈ ಯೋಜನೆಗೆ ಫಲಾನುಭವಿಗಳು ಸಿದ್ಧರಿದ್ದಾರೆ. ಅವರು ಏಕೆ ಮುಂದೆ ಬರುತ್ತಿಲ್ಲ ಎಂದರೆ ತಾವು ಅವರ ಆರ್ಥಿಕ ಆಧಾರವನ್ನು ಎರಡೂವರೆ ಎಕರೆ ಎಂದು ಮಾಡಿದ್ದೀರಿ. ಕೇಂದ್ರಸರ್ಕಾರ ಆ ತರಹ ಎರಡೂವರೆ ಎಕರೆ ಇರಬೇಕು ಎಂದು ಹೇಳಿಲ್ಲ. ಅರ್ಧ ಎಕರೆ ಇರಬಹುದು,

ಒಂದು ಎಕರೆ ಇರಬಹುದು, ಯಾವುದೇ ಎಸ್‌ಸಿ : ಎಸ್‌ಟಿ ಜನಾಂಗದವರು ಮುಂದೆಬಂದರೆ ಅವರಿಗೆ ಈ ಯೋಜನೆಯಲ್ಲಿ ಅವಕಾಶ ಇದೆ ಎಂದು ಹೇಳಿದರೆ ಅವರು ಮುಂದೆ ಬರುತ್ತಾರೆ. ಆ ರೀತಿ ಕೆಲಸ ಮಾಡದೇನೆ ಎರಡನೆಯದು ನೀವು ನಿಶ್ಚಿತವಾದಂಥ ಈ ಕಾರ್ಯಕ್ರಮಗಳಿಗೆ ಹಣವನ್ನು ಬಿಡುಗಡೆ ಮಾಡಿದಾಗ ಅದನ್ನು ಬೇರೆ ಬಾಬುಗಳಿಗೆ ಖರ್ಚು ಮಾಡುತ್ತೀರಿ. ಅಂದರೆ ಎಸ್‌ಸಿ : ಎಸ್‌ಟಿ ಹೆಸರಿನಲ್ಲಿ ಖರ್ಚು ಮಾಡುತ್ತೇನೆ ಎಂದು ನೀವು ಹೇಳುತ್ತೀರಿ. ಆದರೆ ನಾನು ಎಲ್ಲ ಅಂಕಿಅಂಶಗಳನ್ನು ಕೊಡುತ್ತೇನೆ. ಇಲ್ಲಿ ಬಂದಂಥ ಹಣವನ್ನು ನೀವು ಪೂರ್ಣವಾಗಿ ಉಪಯೋಗ ಮಾಡುಕೊಳ್ಳುತ್ತಿಲ್ಲ. ಕೇಂದ್ರಸರ್ಕಾರದ ಹಣ ಮಾತ್ರ ಉಪಯೋಗ ಮಾಡಿಕೊಳ್ಳುತ್ತಿದ್ದೀರಿ.

ಅಧ್ಯಕ್ಷರು :— ಯಡಿಯೂರಪ್ಪನವರೇ, ಸ್ವಲ್ಪ ನನ್ನ ಅನುಭವವನ್ನು ನಿಮಗೆ ಹೇಳುತ್ತೇನೆ. ನಮ್ಮ ವಿಪರ್ಯಾಸ ಏನು ಎಂದರೆ ಈ ಯೋಜನೆಗಳೆಲ್ಲ ರೂಪಿತವಾಗುವುದು ಡೆಲ್ಲಿಯಲ್ಲಿ. ಅವರು ಯಾರೂ ನಮ್ಮ ಊರಿಗೆ ಬರಲೂ ಇಲ್ಲ, ನಮ್ಮ ಊರನ್ನು ನೋಡಿಯೂ ಇಲ್ಲ. ಟ್ಯೂಬ್‌ವೆಲ್ ಬಂದಮೇಲೆ ಬೋರ್‌ವೆಲ್ ಬಂದಮೇಲೆ ಓಪನ್‌ವೆಲ್ ಮಾಡಲು ಸಾಧ್ಯವಿಲ್ಲ. ಅರ್ಧ, ಮುಕ್ಕಾಲು ಎಕರೆಯಲ್ಲಿ ಇದು ಸಾಧ್ಯವೇ ಇಲ್ಲ. ನಮ್ಮಲ್ಲಂತೂ ಆಗಲಿಲ್ಲ. ನಾಲ್ಕುನೂರು, ಐದುನೂರು ಅಡಿ ಹೋಗುತ್ತಿದ್ದೇವೆ. ಯಾವ್ಯಾವ ಪ್ರದೇಶಗಳಿಗೆ ಹೇಗೆ ಇದನ್ನು ಮಾರ್ಪಾಡು ಮಾಡಬೇಕು ಎನ್ನುವಷ್ಟು ತಾಳ್ಮೆ ಮತ್ತೊಂದು ಅವರಿಗೆ ಇಲ್ಲ. ಅನೇಕ ಸಂದರ್ಭದಲ್ಲಿ ಅವರ ಇಲಾಖೆಗೆ ಸಂಬಂಧಿಸಿದ ಬೇಡಿಕೆಯನ್ನು ಹಿಡಿದುಕೊಂಡು ಕಳೆದ ನಾಲ್ಕು ವರ್ಷಗಳಲ್ಲಿ ಐವತ್ತು ಸಲ ನಾನು ಡೆಲ್ಲಿಗೆ ಹೋಗಿದ್ದೇನೆ. ಅತಿ ಒಂದು ಸಣ್ಣ ವಿಚಾರವನ್ನೂ ಒಪ್ಪಿಸುವುದು ಕೂಡ ಕಷ್ಟವಾಗುತ್ತದೆ. ನನ್ನ ಕ್ಷೇತ್ರದಲ್ಲಿ ಮಾಡಿಸಬೇಕು ಎಂದು ನಾನು ಪ್ರಯತ್ನ ಪಟ್ಟಿ. ಆದರೆ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಆದರೆ ದುಡ್ಡು ಮಾತ್ರ ದುರುಪಯೋಗವಾಗುತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಕೆಲವು ಏರಿಯಾದಲ್ಲಿ ಈಗಲೂ ಸಹ ನಮ್ಮ ಕಡೆ 40-50-60 ಅಡಿ ಆಳ ಹೋದರೆ ನೀರು ಸಿಗುತ್ತದೆ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ ನಾವು 60 ಅಡಿಯಲ್ಲಿ ಮಾಡುವಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಎರಡು ಎಕರೆ ಇದ್ದವರಿಗೆ ಮಾತ್ರ ಕೊಡಬೇಕು ಎಂದು ಹೇಳಿಲ್ಲ. ಅದು ಮೊದಲನೆಯದು. ಎರಡನೆಯದು, ಎಂದರೆ ಈ ಯೋಜನೆ ಉಪಯೋಗವಾಗುತ್ತಿಲ್ಲ ಎಂದರೆ ಪರ್ಯಾಯವಾಗಿ ನೀವು ಏನು ಸಲಹೆ ಕೊಟ್ಟಿದ್ದೀರಿ? ನಿಮ್ಮ ಸರ್ಕಾರದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಹಣ ಬರುತ್ತದೆ ಅದು ಲ್ಯಾಪ್ಸ್ ಆಗುತ್ತದೆ. ಈ ಸವಲತ್ತು ಯಾರಿಗೆ ತಲುಪಬೇಕೋ ಅವರಿಗೆ ತಲುಪುತ್ತಾ ಇಲ್ಲ. ಬೇರೆಬೇರೆಯದ್ದಕ್ಕೆ ಉಪಯೋಗ ಮಾಡುತ್ತೇವೆ ಎಂದು ಹೇಳುತ್ತೀರಿ. ನನಗೆ ಒಂದು ಸ್ಪಷ್ಟವಾದ ಉತ್ತರ ಏನು ಬೇಕು ಎಂದರೆ ಈ ರೀತಿ ಪ್ರಯೋಜನದಾರರು ಸಿಗದೇ ಇದ್ದಾಗ ಕೇಂದ್ರ

ಸರ್ಕಾರಕ್ಕೆ ನೀವು ಪತ್ರ ಬರೆದಿದ್ದೀರಾ? ಯೋಜನೆಯಲ್ಲಿ ಬದಲಾವಣೆ ಆಗಬೇಕು ಎಂದು ಕೇಳಿದ್ದೀರಾ? ಇಂತಿಂಥ ಏರಿಯಾದಲ್ಲಿ ಅನುಕೂಲವಾಗುತ್ತಿಲ್ಲ, ಸ್ವಲ್ಪ ಬದಲಾವಣೆ ಮಾಡಿ ಎನ್ನುವ ರೀತಿಯಲ್ಲಿ ಸಲಹೆ ಏನಾದರೂ ಕೊಡುತ್ತೀರಾ?

ಶ್ರೀ ಆರಗ ಜ್ಞಾನೇಂದ್ರ :— ಅಧ್ಯಕ್ಷರೇ, ನಾನು ಇದಕ್ಕೆ ಪೂರಕವಾಗಿ ಹೇಳುತ್ತೇನೆ. ಮಾನ್ಯ ಸಚಿವರು ತೆರೆದ ಬಾವಿ ತೆಗೆಯುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ಆದರೆ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಕೆಲವು ಭಾಗಗಳಲ್ಲಿ ತೆರೆದ ಬಾವಿಗಳೇ ಯಶಸ್ವಿಯಾಗುತ್ತಿವೆ. ಆದರೆ ಎಸ್.ಆರ್. ರೇಟನ್ನು ಇವರು ಪರಿಶೀಲನೆ ಮಾಡಲೇ ಇಲ್ಲ. ಇವರು ಹೇಳುವಂಥ ಆಳ, ಅಗಲ ತೆಗೆದರೆ 35 ಸಾವಿರ ರೂಪಾಯಿಗಳು ಎಂದು ನೀವು ನಿಗದಿ ಮಾಡಿದ್ದೀರಿ. ಅದನ್ನು ತೆಗೆದರೆ ಎಸ್.ಆರ್. ರೇಟಿಗೂ ಮತ್ತು ಇದಕ್ಕೂ ಅಜಗಜಾಂತರ ವ್ಯತ್ಯಾಸ ಇದೆ. ಇವರ ಕಂಡೀಶನ್‌ನಿಂದಾಗಿ ನಾವು ನಮ್ಮ ತಾಲ್ಲೂಕುಗಳಲ್ಲಿ ಹಣ ಉಪಯೋಗ ಮಾಡುವುದಕ್ಕೆ ಆಗುತ್ತಿಲ್ಲ. ಶಿವಮೊಗ್ಗ ಜಿಲ್ಲಾಪಂಚಾಯತ್ ಈಗಾಗಲೇ ನಿರ್ಣಯಮಾಡಿ ಸರ್ಕಾರಕ್ಕೆ ಕಳಿಸಿ ಒಂದೂವರೆ ವರ್ಷ ಆಗಿದೆ.

ಅಧ್ಯಕ್ಷರು :— ಇವರು ರೂಪಿಸುವುದು ಇಲ್ಲವೇ ಇಲ್ಲ. ಡೆಲ್ಲಿಯಲ್ಲಿ ನಮ್ಮ ನಿಮ್ಮ ಬಂಧುಗಳಿದ್ದಾರಲ್ಲ, ಸೋದರ ಮಾವನ ಮಕ್ಕಳು 40 ವರ್ಷಗಳಿಂದ ಅವರೇ ರೂಪಿಸುತ್ತಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ :— ಪಿ.ಡಬ್ಲ್ಯೂ.ಡಿ.ಯಲ್ಲಿ ತೆರೆದ ಬಾವಿಗಳನ್ನು ತೆಗೆಯುವುದಕ್ಕೆ ಎಷ್ಟು ಆಗುತ್ತದೆ ಎಂದು ಎಸ್.ಆರ್. ಇದೆ. ಆದರೆ ಅವರ ಅರ್ಧ ಭಾಗದಷ್ಟು ಕೂಡ ಇವರು ಹಣ ಕೊಡುತ್ತಿಲ್ಲ. ಹರಿಜನಗಿರಿಜನರು ಅವರ ಕೈಯಿಂದ ಹಾಕಿಕೊಂಡು ಮಾಡುವುದಕ್ಕೆ ಆಗುವುದಿಲ್ಲ. ಮಾಡಿರುವುದಕ್ಕೆ ಹಣ ಕೂಡ ರಿಲೀಸ್ ಮಾಡುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :— ಹೋದ ವರ್ಷದ ದುಡ್ಡು ಇನ್ನೂ ಬಂದಿಲ್ಲ.

ಶ್ರೀ ಆರಗ ಜ್ಞಾನೇಂದ್ರ :— ತುಂಬಾ ಉಪಯುಕ್ತವಾಗಿರತಕ್ಕ ಯೋಜನೆ ಅನುಷ್ಠಾನ ಆಗದೇ ಅನಾವಶ್ಯಕವಾದದ್ದು ಆಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ :— ಸನ್ಮಾನ್ಯ ಅಧ್ಯಕ್ಷರೇ, 2,172.23 ಕೋಟಿ ರೂಪಾಯಿಗಳನ್ನು ಇಲ್ಲಿಯವರೆಗೆ ಈ ವಿಚಾರಕ್ಕಾಗಿ ನಾವು ಹಣ ಬಿಡುಗಡೆ ಮಾಡಿದ್ದೇವೆ. ಈಗ ಬಂದಿರತಕ್ಕಂಥ ಈ ವರ್ಷದ ಎಲ್ಲ ವಿವರಗಳನ್ನು ನಾನು ಕೊಟ್ಟಿದ್ದೇನೆ.

ಒಬ್ಬ ಸದಸ್ಯರು :— ರಾಜ್ಯ ಸರ್ಕಾರದ್ದು ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ :— ಶೇಕಡಾ 20 ಭಾಗ ನಾವು ಬಿಡುಗಡೆ ಮಾಡಿದ್ದೇವೆ. ನಮ್ಮ ಶೇಕಡಾ 20 ಭಾಗ ಕೊಟ್ಟಿರತಕ್ಕಂಥ ವಿವರಗಳನ್ನು ನಾನು ಕೊಡುತ್ತೇನೆ. ಮಾನ್ಯ ಸದಸ್ಯರು ಹೇಳಿದಂತೆ ಎರಡೂವರೆ ಎಕರೆ ಜಮೀನು ಪರಿಶಿಷ್ಟ ಜಾತಿ ಮತ್ತು ಪಂಗಡದವರು ಇಟ್ಟುಕೊಂಡು ಇದರ ಉಪಯೋಗ ತೆಗೆದುಕೊಳ್ಳಬೇಕು ಎಂದು ಹೇಳಿ ನಾವು ಹಾಕಿರತಕ್ಕಂಥ ಷರತ್ತಿನ ಉದ್ದೇಶವಾದರೂ ಇಷ್ಟೇ. ಅದು ಆಕಸ್ಮಾತ್ತಾಗಿ ಬಾವಿ ತೆಗೆದು ಪರಿಶಿಷ್ಟ ಜಾತಿ ಮತ್ತು ಪಂಗಡದವರು ಹಾಗೆ ಉಪಯೋಗ ಮಾಡಬೇಕಾದರೆ ಎರಡೂವರೆ ಎಕರೆ ಜಮೀನು ಇದ್ದರೆ ಮಾತ್ರ ಅದು ಒಂದು ಆರ್ಥಿಕವಾಗಿ ವಯಬಲ್ ಯೂನಿಟ್ ಆಗಿ ಇರಲಿಕ್ಕೆ ಸಾಧ್ಯ. ಆದ್ದರಿಂದ ಸಂಪೂರ್ಣವಾಗಿ ವಯಬಲ್ ಆಗಿರತಕ್ಕಂಥಾದ್ದು ಕಾರ್ಯಸಾಧುವಾದಂಥ ಯೋಜನೆಯಾಗಿ ಪ್ರತಿಫಲ ಅಲ್ಲಿ ಬರಬೇಕು ಎಂದರೆ ಕನಿಷ್ಟ ಎರಡೂವರೆ ಎಕರೆಯಾದರೂ ಇರಬೇಕು ಎಂದು ನಾವು ನಿಗದಿ ಮಾಡಿದ್ದೇವೆ. ನಮ್ಮಲ್ಲಿ, ಇಲ್ಲಿ 35 ಸಾವಿರ ಘಟಕಗಳು ಎನ್ನತಕ್ಕದ್ದು ಏನಿದೆ, ಅದು ನಿಯಮಾವಳಿಯಲ್ಲಿ ಇರತಕ್ಕಂಥಾದ್ದು. ಅವರು ಏನು ಮಾಡುತ್ತಾರೆ ಎಂದರೆ ಮಾನ್ಯ ಅಧ್ಯಕ್ಷರು ಹೇಳಿದಂತೆ, ಅಲ್ಲಿರುವಂಥ ಗಂಗಾಬಯಲು ಪ್ರದೇಶವನ್ನು ನೋಡಿಕೊಂಡು ನಿರ್ಣಯ ಮಾಡುತ್ತಾರೆ.

ಅಧ್ಯಕ್ಷರು :— ಅವರು ಅದನ್ನು ನೋಡುವುದಿಲ್ಲ. ಅದನ್ನು ನೋಡುವುದಕ್ಕೆ ಅವರಿಗೆ ಪಾಪ ಟೈಮ್ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ :— ಸಾಗರ- ತೀರ್ಥಹಳ್ಳಿಯಲ್ಲಿ ಇರತಕ್ಕಂಥ ವಿಚಾರ ನಮ್ಮ ಹಳೆ ಶಿವಮೊಗ್ಗ ಜಿಲ್ಲೆಯಲ್ಲಿ ಇರತಕ್ಕಂಥ ಹೊನ್ನಾಳಿ, ಚನ್ನಗಿರಿಯಲ್ಲಿ ಇರಲಿಕ್ಕೆ ಸಾಧ್ಯವಿಲ್ಲ. ಹೀಗೆ ವಾಸ್ತವಿಕವಾಗಿ ವ್ಯತ್ಯಾಸ ಆಗುತ್ತಾ ಇರುವುದರಿಂದ 35 ಸಾವಿರ ರೂಪಾಯಿ ಗರಿಷ್ಠ ಮಟ್ಟ ಎನ್ನುವುದು ಇರುವುದರಿಂದ ಆ ಕೆಲಸ ಮಾಡಿದ್ದೇವೆ. ಈಗ ತಾವೇನು ಕೇಳಿಕೊಂಡಿದ್ದೀರಿ, ಶಿವಮೊಗ್ಗ ಜಿಲ್ಲೆಗೆ ಜನವರಿ ತಿಂಗಳವರೆಗೆ ಇರತಕ್ಕಂಥ ಅಂಕಿಅಂಶಗಳು ಲಭ್ಯವಾಗಿರತಕ್ಕಂಥಾದ್ದನ್ನು ನಾನು ಕೊಟ್ಟಿದ್ದೇನೆ. ಉಳಿದಿರತಕ್ಕಂಥ ಪ್ರಗತಿಯನ್ನು ಖಂಡಿತವಾಗಿಯೂ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ :— ದುಡ್ಡೇ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಸ್ಪಷ್ಟವಾದ ಉತ್ತರ ಬರಲಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ :— ಸರ್ಕಾರವನ್ನು ನಡೆಸತಕ್ಕವರು ನಾವು. ಆದ್ದರಿಂದ ದುಡ್ಡು ಕೊಟ್ಟಿದ್ದೇವೆ ಎಂದು ಹೇಳುತ್ತೇನೆ. ಆಕಸ್ಮಾತ್ ದುಡ್ಡು ಕೊಟ್ಟಿಲ್ಲವೆಂದರೆ ನಾನು ನಿಮ್ಮನ್ನು ಕೊಟ್ಟಿದ್ದೇವೆ ಎಂದು ಒಪ್ಪಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ದುಡ್ಡು ಇಲ್ಲ ಎಂದು ನಾನು ಬರೆದು ತರಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ :— ಆಗಬಹುದು. ಒಂದು ಉದಾಹರಣೆ ಹೇಳಬೇಕಾದರೆ 27 ಜಿಲ್ಲೆಗಳಲ್ಲಿ 24 ಜಿಲ್ಲೆಗಳಿಗೆ ಎರಡನೇ ಕಂತಿನ ಹಣ ಬಂದಿರತಕ್ಕಂಥಾದ್ದು ಇದೆ. ಆದರೆ ಮೂರು ಜಿಲ್ಲೆಗಳಿಂದ ಎರಡನೇ ಕಂತಿನ ಬಗ್ಗೆ ಇದುವರೆಗೂ ಕೂಡ ಪ್ರಸ್ತಾವನೆ ಬಂದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಯುಟಿಲೈಸೇಶನ್ ಸರ್ಟಿಫಿಕೇಟ್ ಕಳಿಸಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ :— ದಯಮಾಡಿ ಕೇಳಿ. 27 ಜಿಲ್ಲೆಗಳಲ್ಲಿ 24 ಜಿಲ್ಲೆಗಳಿಗೆ ಎರಡನೇ ಕಂತಿನ ಹಣ ಬಂದಿದೆ. ಉಡುಪಿ, ಕೊಡಗು, ಮತ್ತು ಗುಲ್ಬರ್ಗಾ ಜಿಲ್ಲೆಗಳಿಂದ ಎರಡನೇ ಕಂತಿನ ಅನುದಾನಕ್ಕೆ ಪ್ರಸ್ತಾವನೆಯನ್ನು ಇಲ್ಲಿಯವರೆಗೂ ಕಳಿಸಿಲ್ಲ. ಅದು ಬಂದ ತಕ್ಷಣ ಅವರಿಗೆಲ್ಲ ಪತ್ರ ಕಳಿಸಿದ್ದೇವೆ. ನಿಮಗೆ ಎರಡನೇ ಕಂತಿನ ಹಣಕ್ಕೆ ಹಣ ಉಪಯೋಗ ಮಾಡಿರತಕ್ಕಂಥ ಪ್ರಮಾಣ ಪತ್ರವನ್ನು ಕಳಿಸಿಕೊಡಿ ಎಂದು ಹೇಳಿದ್ದೇನೆ. ಉಡುಪಿ, ಕೊಡಗು ಮತ್ತು ಗುಲ್ಬರ್ಗಾ ಈ ಮೂರು ಜಿಲ್ಲೆಗಳನ್ನು ಬಿಟ್ಟರೆ ಉಳಿದ ಎಲ್ಲ ಜಿಲ್ಲೆಗಳಿಂದ ಬಂದಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ನನ್ನ ಮೂಲ ಪ್ರಶ್ನೆ ಏನು ಎಂದರೆ, ನಂಬರ್ ಒಂದು, ಕೇಂದ್ರ ಸರ್ಕಾರ ಎರಡು ಕಂತು ಹಣ ಮಾತ್ರ ಕಳಿಸಿಕೊಟ್ಟಿದೆ. ಅವರು ಉಳಿದ ಹಣವನ್ನು ಯಾವಾಗ ಕಳಿಸಿಕೊಡುತ್ತಾರೆ? ಈಗ ನಾವು ಮಾರ್ಚ್ ಕೊನೆಯೊಳಗೆ ಇದ್ದೇವೆ. ನೀವು ನಿಮ್ಮ ಜಿಲ್ಲಾಧಿಕಾರಿಗಳಿಂದ, ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಯುಟಿಲೈಸೇಶನ್ ಸರ್ಟಿಫಿಕೇಟ್‌ನ್ನು ತರಿಸಿಕೊಂಡು ಮೂರನೇ ಕಂತನ್ನು ಕೇಳಬೇಕಿತ್ತು. ಇದನ್ನು ಮಾಡದೇ ಇದರಲ್ಲಿ ನೀವು ವಿಫಲರಾಗಿದ್ದೀರಿ. ನೀವು ಕೇಳಿಲ್ಲ. ಮೊದಲನೆಯದಾಗಿ ನನ್ನ ಹತ್ತಿರ ಇರುವ ಅಂಕಿಅಂಶಗಳನ್ನು ನೀವೇ ಹೇಳಿದ ಪ್ರಕಾರ ನಾನು ಕೊಡುತ್ತೇನೆ. 1996-97, 97-98 ಮತ್ತು 98-99 ಈ ಮೂರು ವರ್ಷಗಳ ಅಂಕಿಅಂಶಗಳನ್ನು ನೋಡಿದಾಗ ಅವರಿಂದ ಬಂದ ಹಣ ಲ್ಯಾಪ್ಸ್ ಆಗಿದೆ ಎಂಬುದು ಸ್ಪಷ್ಟವಾಗುತ್ತದೆ. ಅಂದರೆ ನಿಮ್ಮ ಇಲಾಖೆ ಬದುಕಿದ್ದರೂ ಸತ್ತಂತಾಗಿದೆ. ನಿಮಗೆ ಕಳಕಳಿಯೇ ಇಲ್ಲ.

ಅಧ್ಯಕ್ಷರು :— ಯುಟಿಲೈಸೇಶನ್ ಸರ್ಟಿಫಿಕೇಟ್ ಪ್ರಶ್ನೆ ಎಂದರೆ ಅದನ್ನು ಆಧರಿಸಿ ಹಣ ಬಿಡುಗಡೆ ಮಾಡತಕ್ಕಂಥಾದ್ದು -only in respect of Employment Affirmation Scheme. ಇದಕ್ಕೆ ಅವರು ಟಾರ್ಗೆಟ್ ಫಿಕ್ಸ್ ಮಾಡುತ್ತಾರೆ ಮತ್ತು ಅಮೌಂಟ್ ರಿಲೀಸ್ ಮಾಡುತ್ತಾರೆ. ಅದಕ್ಕೆ 20 ಪರ್ಸೆಂಟ್ ಇವರು ಹಾಕಿ ಮಾಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ನಾನು ತಮ್ಮಲ್ಲಿ ಏನು ವಿನಂತಿ ಮಾಡುತ್ತಿದ್ದೇನೆ ಎಂದರೆ ಈಗ ಕೇಂದ್ರ ಸರ್ಕಾರ ಮೊದಲನೇ, ಎರಡನೇ ಕಂತುಗಳನ್ನು ಕೊಟ್ಟಿದೆ. ಆ ಕಂತುಗಳ ಯುಟಿಲೈಸೇಶನ್ ಸರ್ಟಿಫಿಕೇಟ್ ಕೊಡದೇ ಇದ್ದರೆ ಆ ಹಣವನ್ನು ಬೇರೆಬೇರೆ ರಾಜ್ಯಗಳು ಉಪಯೋಗಿಸುವುದಕ್ಕೆ ಡೈವರ್ಟ್ ಮಾಡಿದ್ದಾರೆ. ಇದು ನಾನು ಡೆಲ್ಲಿಯಲ್ಲಿ ನೋಡಿಕೊಂಡು ಬಂದು ಕೇಳುತ್ತಿದ್ದೇನೆ. ಎರಡನೆಯದು, ಇವತ್ತು ನೀವು ಹೇಳಿದ್ದೀರಲ್ಲ 1998-99 ನೇ ಸಾಲಿನಲ್ಲಿ 10 ಕೋಟಿ 54 ಲಕ್ಷ ಏನು ಖರ್ಚಾಗಿಲ್ಲ ಅದನ್ನು ಬೇರೆ ಬಾಬುಗಳಿಗೆ ಕೊಟ್ಟಿದ್ದೀರಾ? ಅದನ್ನು ಯಾವ ಬಾಬಿಗೆ ಖರ್ಚು ಮಾಡಿದ್ದೀರಿ? ಮೂರನೆಯದು, ಈ ಎರಡೂವರೆ, ಒಂದೂವರೆ, ಒಂದು ಎಕರೆ ಇದ್ದವರು ಉಪಯೋಗ ಮಾಡಿಕೊಳ್ಳುತ್ತಾರೆ ಎನ್ನುವುದಾದರೆ ನೀವು ಅಧಿಕಾರ ವಿಕೇಂದ್ರೀಕರಣ ಮಾತು ಹೇಳುತ್ತೀರಿ ತಾವು ಜಿಲ್ಲಾ ಪಂಚಾಯತ್‌ಗೆ ಅಧಿಕಾರ ಕೊಡಿ. ಈ ಮೂರಕ್ಕೆ ನನಗೆ ನೇರವಾದ ಉತ್ತರ ಬೇಕು.

ಶ್ರೀ ಎಂ.ಪಿ. ಪ್ರಕಾಶ್ :— ಮಾನ್ಯ ಅಧ್ಯಕ್ಷರೇ, ಏಕೋ ಯಡಿಯೂರಪ್ಪನವರು ಯಾವಾಗಲೂ ಸಾವಿನ ಸುದ್ದಿಯನ್ನೇ ಮಾತನಾಡುತ್ತಾರೆ. ಸರ್ಕಾರ ಸತ್ತೇ ಹೋಗಿದೆ, ಸತ್ತೇ ಹೋಗಿದೆ ಎಂದು ಯಾವಾಗಲೂ ಹೇಳುತ್ತಾರೆ. ಈ ಸಾವಿನ ಸುದ್ದಿ ನಿಮ್ಮಂತಹವರ ಬಾಯಲ್ಲಿ ಬರಬಾರದು. ಬದುಕುವ ಸುದ್ದಿಯನ್ನು ತಾವು ದಯಮಾಡಿ ಹೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ :— ಈ ಸರ್ಕಾರ ಉಸಿರುಕಟ್ಟಿ ಬದುಕುತ್ತಾ ಇದೆ.

ಶ್ರೀ ಎಂ.ಪಿ. ಪ್ರಕಾಶ್ :— ಆ ರೀತಿ ಕೇಂದ್ರದಲ್ಲಿ ಆಗುತ್ತಾ ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಿಮ್ಮ ಸರ್ಕಾರ ಉಳಿದಿದೆ, ಇಲ್ಲ ಎಂದಲ್ಲ. ಈ ಬ್ಯಾಲೆನ್ಸಿಂಗ್ ಬಾಲ್ ಇದ್ದಹಾಗೆ. ಅಲುಗಾಡುತ್ತದೆ ಮತ್ತೆ ಖಡಿಯಾಗುತ್ತದೆ. ಬೀಳುತ್ತದೆ. ಏಳುತ್ತದೆ ಆದರೆ ಪೂರ್ತಿ ಬೀಳುವುದಿಲ್ಲ. ಅದಕ್ಕೆ ಈ ಸರ್ಕಾರ ಸ್ಥಿರವಾಗಿಲ್ಲ. ಆದ್ದರಿಂದ, ಅವರ ನಿರ್ಣಯವೂ ಸ್ಥಿರವಾಗಿ ಇಲ್ಲ. ಅದಕ್ಕಾಗಿ, ಪಾಪ ಅವರು ಹೇಳುತ್ತಿದ್ದಾರೆ.

MR. SPEAKER: That is on account of continuous hard work.

ಶ್ರೀ ವಾಟಾಳ್ ನಾಗರಾಜ್ :— ಸರ್ಕಾರ ಬದುಕಿದ್ದರೂ ಕೂಡ ಸತ್ತಹಾಗೆ ಇದೆ ಎಂದು ಹೇಳಿದ್ದಾರೆ. ಆದರೆ, ಸತ್ತಿದೆ ಎಂದು ಹೇಳಲಿಲ್ಲ. ಅಂದರೆ, ಜೀವಂತವಾಗಿದ್ದರೂ ಸತ್ತಹಾಗೆ ಇದೆ.

ಶ್ರೀ ಎಂ.ಪಿ. ಪ್ರಕಾಶ್ :— ಯಾವ ಯಾವ ಪಕ್ಷಗಳ ಆರೋಗ್ಯಸ್ಥಿತಿ ಹೇಗಿದೆ ಎಂದು ಯಾವುದೇ ಪಕ್ಷಕ್ಕೆ ಸೇರಿದೇ ಇರತಕ್ಕಂಥ ತಮಗೆ ಗೊತ್ತಿದೆ. ಕೇಂದ್ರದ ಆರೋಗ್ಯ ಸ್ಥಿತಿ ಎಷ್ಟು ಚೆನ್ನಾಗಿದೆ, ನಮ್ಮ ಆರೋಗ್ಯ ಸ್ಥಿತಿ ಎಷ್ಟು ಚೆನ್ನಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅವರು ಯಾವಾಗಲೂ ನಿಮಗೆ ಸಪೋರ್ಟ್ ಆಗಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ :— ಅವರು ನಮ್ಮ ಪರವೇ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ :— ಪ್ರಧಾನ ಮಂತ್ರಿಗಳು ಬಂದಾಗ, ಮುಖ್ಯಮಂತ್ರಿಗಳು ಒಟ್ಟಿಗೇ ಒಬ್ಬರು ಸ್ವಾಮಿಗಳ ಹತ್ತಿರ ಹೋಗಿ, ನಮ್ಮಿಬ್ಬರ ಆರೋಗ್ಯ ಸರಿಪಡಿಸಿ, ನಮ್ಮಿಬ್ಬರದೂ ಕೆಟ್ಟುಹೋಗಿದೆ ಎಂದು ಅವರು ಹೇಳಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ :— ಆ ರೀತಿ ಹೇಳಿಲ್ಲ. He has asked; How is your health? He replied: it is as good as yours ಅಂತ ಅಂದರಂತೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ನಾನು ಇಡೀ ರಾಜ್ಯದ ಬಗ್ಗೆ ಕೇಳುತ್ತಿದ್ದೇನೆ. ತಾವು ದಯವಿಟ್ಟು ಡೈವರ್ಟ್ ಮಾಡಬೇಡಿ.

ಶ್ರೀ ಎಂ.ಪಿ. ಪ್ರಕಾಶ್ :— ನಾನು ಇಡೀ ರಾಜ್ಯದ ಬಗ್ಗೆ ಹೇಳುತ್ತಾ, ಇದರಲ್ಲಿ ಮಾನ್ಯ ಹಾಗೋಡು ತಿಮ್ಮಪ್ಪನವರಿಗೂ ಉತ್ತರ ಕೊಡುವುದಕ್ಕಾಗಿ ಹೇಳುತ್ತಿದ್ದೇನೆ. ಅವರು ಹಣ ಎಲ್ಲಿದೆ, ನಾನು ಮೊನ್ನೆ ಕೇಳಿದ್ದೇನೆಂದು ಹೇಳಿದರು. ನಾವು ಫೆಬ್ರವರಿ ತಿಂಗಳಲ್ಲಿ 30 ಲಕ್ಷ ರೂಪಾಯಿಗಳನ್ನು ಶಿವಮೊಗ್ಗ ಜಿಲ್ಲೆಗೆ ಹೆಚ್ಚುವರಿಯಾಗಿ ಹಣ ಕೊಟ್ಟಿದ್ದೇವೆ. ಆಮೇಲೆ ಯುಟಿಲೈಸೇಷನ್ ಮಾಡದೇ ಇರುವುದಕ್ಕೆ ಏನು ಕಾರಣ ಎಂದರೆ, ಫಲಾನುಭವಿಗಳು ಮುಂದೆ ಬಂದಿಲ್ಲವೆಂದು ಕಾರಣವನ್ನು ನಾನಾಗಲೇ ತಮಗೆ, ಅಧ್ಯಕ್ಷರ ಮೂಲಕ ಅರಿಕೆ ಮಾಡಿಕೊಂಡಿದ್ದೇನೆ. ಶಿವಮೊಗ್ಗ ಜಿಲ್ಲೆಯಲ್ಲಿ ನಾವು ಹೆಚ್ಚಿನ ಪ್ರಗತಿಯನ್ನು ಮಾಡುತ್ತೇವೆ ಎಂಬ ಮಾತನ್ನು ಹೇಳಿದ್ದೇನೆ. ಇದಲ್ಲದೇ ಎರಡನೇ ಕಂತಿನ ಮೇಲೆ, ಅವರು ಯಾವ ಹಣವನ್ನೂ ಕೊಡುವುದಿಲ್ಲ. ಈಗಾಗಲೇ ಮಾನ್ಯ ಅಧ್ಯಕ್ಷರು ಹೇಳಿದಂತೆ, ಇ.ಎ.ಎಸ್.ನಲ್ಲಿ 3ನೇ ಕಂತನ್ನೂ ಕೂಡ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲವೆಂದು ನಮಗೆ ಕೇಂದ್ರ ಸರ್ಕಾರ ತಿಳಿಸಿದೆ. ಹೋದಸಲವೂ ಕೂಡ ಮಾರ್ಚ್ ತಿಂಗಳಲ್ಲಿ ಇ.ಎ.ಎಸ್.ನಲ್ಲಿ ಬರಬೇಕಾದ 3ನೇ ಕಂತನ್ನು ನಾವು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿಬಿಟ್ಟರು. ಆಗ ಸಂದರ್ಭ ಬೇರೆ ಇತ್ತು. ಚುನಾವಣೆಗಳು ಬಂದವು, ಹೆಚ್ಚು ಹಣ ಖರ್ಚಾಗಿತ್ತು. ಹಾಗೆಯೇ ಸರ್ಕಾರಿ ನೌಕರರಿಗೆ ಹೆಚ್ಚು ಹಣ ಕೊಟ್ಟಿವು, ಆದ್ದರಿಂದ ಕಷ್ಟದ ಪರಿಸ್ಥಿತಿ ಇರುವುದರಿಂದ, ನಿಮಗೆ 3ನೇ ಕಂತನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಮತ್ತೆ 1-4-98 ಕ್ಕೆ ಹಣವನ್ನು ಕೊಟ್ಟರು. ಈ ವರ್ಷವೂ ಕೂಡ ಬೇರೆ ಬೇರೆ ಕಷ್ಟಗಳ ಸ್ಥಿತಿ ಇರುವುದರಿಂದ, ನೀವು 3ನೇ ಕಂತನ್ನು ನಿರೀಕ್ಷಿಸಬೇಡಿ ಎಂಬ ಮಾತನ್ನೂ ಕೂಡ ಹೇಳಿದ್ದಾರೆ.